ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4160

ಮಾನ್ಯ ಸದಸ್ಯರ ಹೆಸರು: ಶ್ರೀರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ)

ಉತ್ತರಿಸುವವರು : ಶ್ರೀ ಹೆಚ್.ಡಿ. ರೇವಣ್ಣ
(ಲೋಕೋಪಯೋಗಿ ಹಾಗೂ
ಇಂಧನ ಸಚಿವರು)

ಸಂಖ್ಯೆ	ಪ್ರಶ್ನೆ	ಉತ್ತರ
1	ಹೊನ್ನಾಳಿಯಿಂದ ಹರಿಹರ ಮಾರ್ಗದ ರಸ್ತೆ ಅಭಿವೃದ್ಧಿ ಡಾಂಬರೀಕರಣಕ್ಕೆ ಸರ್ಕಾರದಿಂದ ಮಂಜೂರಾದ ಹಣ ಎಷ್ಟು;	ಹೊನ್ನಾಳಿಯಿಂದ ಹರಿಹರ ಮಾರ್ಗದ 36 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಳ್ಳಲಾಗಿದೆ. ಕಾಮಗಾರಿಯ ಟೆಂಡರ್ ಮೊತ್ತ ರೂ.21.75 ಕೋಟಿಗಳು
2	ಸದರಿ ರಸ್ತೆ ಕಾಮಗಾರಿ ಪೂರ್ಣಗೊಂಡಿದೆಯೇ; ಕಾಮಗಾರಿ ಅಪೂರ್ಣ ಗೊಂಡಿದ್ದಲ್ಲಿ ಕಾರಣವೇನು;	ಕಾಮಗಾರಿಯು ದಿನಾಂಕ 16-12-2004ರಿಂದ ಪ್ರಗತಿಯಲ್ಲಿದೆ. ಗುತ್ತಿಗೆ ಕರಾರು ಪ್ರಕಾರ ಗುತ್ತಿಗೆದಾರ ಕಾಮಗಾರಿಯನ್ನು ಮಾರ್ಚ್ 2006ರಲ್ಲಿ ಪೂರ್ಣಗೊಳಿಸಬೇಕಾಗಿದೆ.
3	2004-05 ಹಾಗೂ 2005-06 ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿ ಮತ್ತು ರಸ್ತೆ ದುರಸ್ತಿಗಾಗಿ ಪ್ರತಿ ವಿಧಾನಸಭೆ ಕ್ಷೇತ್ರಕ್ಕೆ ಮೀಸಲಿಟ್ಟ ಹಣದ ಮೊತ್ತದ ವಿವರ ನೀಡುವುದು;	2004-05 ರ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿಗೆ ಮತ್ತು ರಸ್ತೆ ದುರಸ್ತಿಗಾಗಿ ಬಿಡುಗಡೆ ಮಾಡಲಾದ ಹಣದ ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿರುವ ಅನುಬಂಧದಲ್ಲಿ ಒದಗಿಸಲಾಗಿದೆ. ಲೋಕೋಪಯೋಗಿ ಇಲಾಖೆಗೆ 2005-06ನೇ ಸಾಲಿಗೆ ಲೆಕ್ಕಶೀರ್ಷಿಕೆ 5054 ರಸ್ತೆ ಮತ್ತು ಸೇತುವೆ (ಯೋಜನೆ) ಅಡಿಯಲ್ಲಿ ಉತ್ತರ ಹಾಗೂ ದಕ್ಷಿಣ ವಲಯಕ್ಕೆ ಬರುವ

ಸಂಖ್ಯೆ	ಪ್ರಶ್ನೆ	ಉತ್ತರ
		ಪ್ರತಿ ವಿಭಾಗಗಳ ಎಲ್ಲಾ ವಿಧಾನಸಭಾ ಕ್ಷೇತ್ರಕ್ಕೆ ತಲಾ ರೂ. 20.00 ಲಕ್ಷ ಅನುದಾನವನ್ನು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಬಿಡುಗಡೆ ಮಾಡಲಾಗಿದೆ. ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ರೂ.40.00 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳ ಬಹುದಾಗಿದೆ. ಲೆಕ್ಕಶೀರ್ಷಿಕೆ 3054 ರಸ್ತೆ ಮತ್ತು ಸೇತುವೆ (ಯೋಜನೆ) ಅಡಿ ಯಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ಅಭಿ ವೃದ್ಧಿ ಹಾಗೂ ನಿರ್ವಹಣೆ ಕಾಮಗಾರಿ ಗಳನ್ನು ಕೈಗೆತ್ತಿಕೊಳ್ಳಲು ಕಿಮೀ. ಆಧಾರದ ಮೇಲೆ (ಪ್ರತಿ ಕಿ.ಮೀ.ಗೆ ರೂ16265) ವಿಭಾಗವಾರು ಅನುದಾನ ಹಂಚಿಕೆ ಮಾಡಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಸುಮಾರು ರೂ.20.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.
4	ಹೊನ್ನಾಳಿ–ಹರಿಹರ ರಸ್ತೆಯಲ್ಲಿ ತುಂಗಭದ್ರ ನದಿಗೆ ಕಟ್ಟಿರುವ ಸೇತುವೆ ಅನೇಕ ವರ್ಷಗಳಿಂದ ಶಿಥಿಲಗೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶಿಥಿಲಗೊಂಡಿರುವುದಿಲ್ಲ.
5	ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು'	ಸೇತುವೆಯು 5.00 ಮೀ. ಅಗಲವಿದ್ದು, ಸುಸ್ಥಿತಿಯಲ್ಲಿರುವ ಕಾರಣ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ಸೇತುವೆಯ ಮರುನಿರ್ಮಾಣ ಕಾಮಗಾರಿಯನ್ನು ಹಮ್ಮಿಕೊಂಡಿರುವುದಿಲ್ಲ.

ಸಂಖ್ಯೆ	ಪ್ರಶ್ನೆ	ಉತ್ತರ
6	ಸದರಿ ಸೇತುವೆಯನ್ನು ಹೊಸದಾಗಿ ನಿರ್ಮಾಣ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;	ಸದ್ಯದಲ್ಲಿ ಇರುವುದಿಲ್ಲ.
7	ಹೊನ್ನಾಳಿಯಿಂದ-ಹೊಳಲೂರು ಮಾರ್ಗದ ಶಿವಮೊಗ್ಗಕ್ಕೆ ಇರುವ ರಸ್ತೆಯ ವಿಸ್ತೀರ್ಣ (ಕಿಮೀ) ವೆಷ್ಟು; ಅದರ ಡಾಂಬರೀಕರಣಕ್ಕಾಗಿ ಮಾಡ ಲಾದ ಮೊತ್ತವೆಷ್ಟು ಹಾಗೂ ಪ್ರತಿ ಕಿ.ಮೀಟರ್ ರಸ್ತೆಗೆ ವೆಚ್ಚ ಮಾಡುವ ಮೊತ್ತವೆಷ್ಟು? ರಸ್ತೆಯ ನಿರ್ವಹಣೆ ಯನ್ನು ಯಾರಿಗೆ ವಹಿಸಲಾಗಿದೆ: ಗುತ್ತಿಗೆದಾರರು ಎಷ್ಟು ವರ್ಷಗಳ ವರೆಗೆ ನಿರ್ವಹಣೆ ಮಾಡುವರು; ಪೂರ್ಣ ವಿವರ ನೀಡುವುದು?	ಹೊನ್ನಾಳಿಯಿಂದ ಶಿವಮೊಗ್ಗ (ಹೊಳಲೂರು ಮುಖಾಂತರ) ಸೇರುವ ರಸ್ತೆಯ ಒಟ್ಟು ಉದ್ದ 396 ಕಿಮೀ. ಈ ರಸ್ತೆಯ ಅಭಿವೃದ್ಧಿಗಾಗಿ ಡಾಂಬರೀ ಕರಣ ಸೇರಿದಂತೆ ಒಟ್ಟು ರೂ 15.35 ಕೋಟಿ ಖರ್ಚು ಮಾಡಲಾಗಿದೆ. ಇದರಂತೆ ಪ್ರತಿ ಕಿಮೀ. ರಸ್ತೆಗಾಗಿ ಮಾಡಲಾದ ವೆಚ್ಚ ರೂ 38.80 ಲಕ್ಷಗಳು ಈ ಕಾಮಗಾರಿ ಅಕ್ಟೋಬರ್ 2003 ರಲ್ಲಿ ಪೂರ್ಣಗೊಂಡಿದೆ. ಗುತ್ತಿಗೆ ದಾರರು ಈ ದಿನಾಂಕದಿಂದ ಒಂದು ವರ್ಷದವರೆಗೆ ಈ ಕಾಮಗಾರಿಯಲ್ಲಿ ಯಾವುದಾದರೂ ನ್ಯೂನತೆಗಳು ಕಂಡು ಬಂದಲ್ಲಿ ಅವರ ಖರ್ಚಿನಲ್ಲಿ ಸರಿ ಪಡಿಸುವ ಜವಾಬ್ದಾರಿ ಹೊಂದಿರು ತ್ತಾರೆ.

2004–05ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ವಿವರ

ಅನುದಾನಕ್ಕೆ ಅನುಗುಣವಾಗಿ ಹಾಗೂ ಕಾಮಗಾರಿಗಳ ಅವಶ್ಯಕತೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

(ರೂ. ಲಕ್ಷಗಳಲ್ಲಿ)

ಸಂ.	ವಿಭಾಗ	2004–2005	
		5054 ಯೋಜನೆ	3054 ಯೋಜನೆ
1	ಬೆಂಗಳೂರು	661.20	1200.00
2	ಕೋಲಾರ	1809.17	1195.50
3	ತುಮಕೂರು	1053.62	1400.00
4	ಮೈಸೂರು	852.66	1392.25
5	ಚಾಮರಾಜನಗರ	68.24	719.47
6	ಮಂಡ್ಯ	1136.37	1500.00
7	ಹಾಸನ	776.24	1500.00
8	ಚಿಕ್ಕಮಗಳೂರು	317.49	1204.50
9	ಮಂಗಳೂರು	1168.00	1035.40
10	ಉಡುಪಿ	462.66	701.00
11	ಕೊಡಗು	89.29	660.00
12	ಶಿವಮೊಗ್ಗ	532.85	1411.95
13	ದಾವಣಗೆರೆ	914.31	543.87
14	ಚಿತ್ರದುರ್ಗ	532.00	394.52
15	ಧಾರವಾಡ	221.11	470.60
16	ಹಾವೇರಿ	676.50	257.40
17	ಗದಗ	238.84	330.36
18	ಕಾರವಾರ	305.07	1088.10
19	ಬೆಳಗಾವಿ	229.00	714.29
20	ಚಿಕ್ಕೋಡಿ	302.92	842.20
21	ಬಿಜಾಪುರ	23.18	558.10
22	ಬಾಗಲಕೋಟೆ	128.23	539.20
23	ಗುಲ್ಬರ್ಗಾ	237.10	463.15

(ರೂ. ಲಕ್ಷಗಳಲ್ಲಿ)

ಸಂ.	ವಿಭಾಗ	2004–2005	
		5054 ಯೋಜನೆ	3054 ಯೋಜನೆ
24	ಯಾದಗಿರಿ	861.45	830.00
25	ಬೀದರ	223.51	448.50
26	ಬಳ್ಳಾರಿ	1371.38	882.99
27	ರಾಯಚೂರು	346.05	331.60
28	ಕೊಪ್ಪಳ	88.49	909.50
	ಒಟ್ಟು	**18,683.93**	**23,524.45**

ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ)

ಪ್ರಶ್ನೆ ಸಂಖ್ಯೆ 321, ಉತ್ತರ ಅಲಭ್ಯವಾಗಿದೆ.

ಶ್ರೀ ಎಂ.ಪಿ. ರೇಣುಕಾಚಾರ್ಯ: ಅಧ್ಯಕ್ಷರೇ, ಸರ್ಕಾರ ಒದಗಿಸಿರುವ ಉತ್ತರ ಸಮರ್ಪಕವಾಗಿಲ್ಲ. ಹರಿಹರ–ಹೊನ್ನಾಳಿ ರಸ್ತೆ ದುರಸ್ತಿಯಾಗುತ್ತಿದೆ. ಕೆಲಸ ಪ್ರಾರಂಭವಾಗಿ ಐದಾರು ತಿಂಗಳಾಗಿದ್ದರೂ ಗುತ್ತಿಗೆದಾರರು ಸಮರ್ಪಕವಾಗಿ ಮಾಡುತ್ತಾ ಇಲ್ಲ. ಕೆಲಸವೂ ಕಳಪೆಯಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ): ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆ ಏನಿದೆ ಹೊನ್ನಾಳಿ ಹರಿಹರ ರಸ್ತೆ ಸುಮಾರು 21 ಕೋಟಿ ರೂ ವೆಚ್ಚದಲ್ಲಿ 36 ಕಿ.ಮೀ. ಉದ್ದದ ರಸ್ತೆ ಕೆಲಸವನ್ನು ಈಗಾಗಲೇ ಸರ್ಕಾರ ತೆಗೆದುಕೊಂಡಿದೆ. ಕೆಲಸ ಪ್ರಾರಂಭ ವಾಗಿದೆ. 2381 ಕಿ.ಮೀ. ರಸ್ತೆಯನ್ನು ಎಂಡಿಆರ್ ಮತ್ತು ರಾಜ್ಯ ಹೆದ್ದಾರಿ ರಸ್ತೆಗಳನ್ನು 2001ನೇ ಇಸವಿಯಲ್ಲಿ 2030 ಕೋಟಿ ಖರ್ಚಿನಲ್ಲಿ ತೆಗೆದುಕೊಳ್ಳಬೇಕೆಂದು ಕೇಸಿಫ್ ಸಂಸ್ಥೆಯಿಂದ ಈಗಾಗಲೇ ಅಗ್ರಿಮೆಂಟ್ ಸಹಿತ ಆಗಿದೆ. ಇದನ್ನೆಲ್ಲ 2006ರ ಡಿಸೆಂಬರ್ ಒಳಗೆ ಮುಗಿಸಬೇಕೆಂದು ಒಪ್ಪಂದದಲ್ಲಿದೆ. ಅದರ ಪ್ರಕಾರ 2004ರಲ್ಲಿ ಕಾಂಟ್ರಾಕ್ಟ್ ಒಪ್ಪಂದವಾಗಿ ಕೆಲಸ ಪ್ರಾರಂಭವಾಗಿದೆ. ಈಗ ಮಾನ್ಯ ಸದಸ್ಯರು ಕಳಪೆ ಕೆಲಸ ಎಂದಿದ್ದಾರೆ. ನಾನು ಇಲಾಖೆ ಕಾರ್ಯದರ್ಶಿಗಳಿಗೆ ಸೂಚನೆ

ನೀಡಿ ಕಳಪೆ ಕೆಲಸವಾಗಿದ್ದರೆ ಅದನ್ನು ಉತ್ತಮಪಡಿಸುವುದಕ್ಕೆ ಮತ್ತು ಅದಕ್ಕೆ ಕಾರಣಕರ್ತರಾದವರ ಮೇಲೆ ಕ್ರಮ ತೆಗೆದುಕೊಳ್ಳಲೂ ಸೂಚನೆ ಈಗ ನೀಡುತ್ತೇನೆ. ಎರಡನೆಯದಾಗಿ ಇವರ ಪ್ರಶ್ನೆ ತುಂಗಭದ್ರಾ ಹೊಳೆ ಮೇಲೆ ಕಟ್ಟಿರುವ ಬ್ರಿಡ್ಜ್ ಸ್ವಲ್ಪ ಶಿಥಿಲಗೊಂಡಿದೆ ಎಂದು ಹೇಳಿದ್ದಾರೆ. ಇಂಜಿನಿಯರಿಂಗ್ ಇಲಾಖೆಯರು ಹೋಗಿ ಈ ಸೇತುವೆ ಇನ್ನೂ ಒಂದಷ್ಟು ಕಾಲ ಚೆನ್ನಾಗಿರಬಹುದು ಎಂದು ಹೇಳಿದ್ದಾರೆ. ಆದರೆ ಅದರ ಸರ್ಫೇಸ್ ಕೆಟ್ಟು ಹೋಗಿರುವುದು ನಮ್ಮ ಗಮನಕ್ಕೆ ಬಂದಿದೆ. ಅದನ್ನು 2006ರ ಡಿಸೆಂಬರ್ ಒಳಗೆ ನಾವೇನು ರಸ್ತೆಗಳನ್ನು ಮುಗಿಸುತ್ತೇವೆ. ಆಗ ಆ ಸರ್ಫೇಸ್‌ನ್ನೂ ಕಂಪ್ಲೀಟ್ ಮಾಡುವ ಭರವಸೆಕೊಡುತ್ತೇನೆ. ಇಷ್ಟು ನನ್ನ ಉತ್ತರಕ್ಕೆ ಮಾನ್ಯ ಸದಸ್ಯರಿಗೆ ತೃಪ್ತಿಯಾಗದೇಹೋದರೆ ಕಳಪೆಯಾಗಿರುವುದರ ಬಗ್ಗೆ ಅವರಿಗೆ ಗೊತ್ತಿರುವ ಡೀಟೇಲ್ಸನ್ನು ಬರೆದು ಕಳಿಸಲಿ. ನಾನು ವಿಚಾರಣೆ ಮಾಡಿಸುತ್ತೇನೆ.

ಶ್ರೀ ಎಂ.ಪಿ. ರೇಣುಕಾಚಾರ್ಯ: ಸೇತುವೆ 1920ರಲ್ಲಿ ನಿರ್ಮಾಣ ವಾದದ್ದು. ಇದು ಶಿಥಿಲವಾಗಿರುವುದು ಪತ್ರಿಕೆಗಳಲ್ಲಿ ವರದಿ ಬಂದಿದೆ. ಕೇವಲ ನಾಲ್ಕೂವರೆ ಮೀಟರ್ ಮಾತ್ರ ಇದೆ. ತತ್‌ಕ್ಷಣ ಈ ಸೇತುವೆ ಆಗದೇ ಇದ್ದರೆ ಹೊನ್ನಾಳಿ, ಉತ್ತರ ಕರ್ನಾಟಕ, ಮೈಸೂರು ಮತ್ತು ಮಂಗಳೂರು–ಮುಖ್ಯವಾದ ಮಧ್ಯೆ ಇರುವ ಹೊನ್ನಾಳಿ ಸ್ಥಳ ಅದು. ಸೇತುವೆ ಚೆನ್ನಾಗಿದೆ ಎಂದು ವರದಿ ಬಂದಿದೆ ಎಂದು ಸಚಿವರು ಹೇಳಿದರು, ನನ್ನ ಹತ್ತಿರ ಫೋಟೋ ಸಮೇತ ಇದೆ. ಪೂರಾ ಶಿಥಿಲವಾಗಿದೆ. ಆ ಸೇತುವೆ ಪಕ್ಕ ಮರಗಳು ಬೆಳೆದು ಇವತ್ತೋ ನಾಳೆಯೋ ಬೀಳುವ ಸ್ಥಿತಿಯಿದೆ. ಬಿದ್ದುಹೋದರೆ ಆ ಭಾಗದ ಜನರಿಗೆ ತೊಂದರೆಯಾಗುತ್ತದೆ. ತಕ್ಷಣ ದುರಸ್ತಿಗೆ ಆದೇಶಿಸಲು ಮನವಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಸೇತುವೆ ಅಪಾಯದ ಅಂಚಿನಲ್ಲಿ ಇವರು ಹೇಳತಕ್ಕ ಸ್ಥಿತಿಯಲ್ಲಿ ಇಲ್ಲ. ಆದರೆ ಸೇತುವೆಯ ಸರ್ಫೇಸ್ ಏನು ಇದೆ. ಆ ಸರ್ಫೇಸ್ ಕೆಟ್ಟಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ ಅದನ್ನು ಸರಿಪಡಿಸುತ್ತೇವೆ.

ಒಬ್ಬ ಮಾನ್ಯ ಸದಸ್ಯರು: ಇಲ್ಲಿ ಜಿಲ್ಲಾವಾರು ವಿವರಗಳನ್ನು ಕೊಟ್ಟಿದ್ದಾರೆ. ನಮ್ಮ ಗದಗ್ ಜಿಲ್ಲೆಗೆ 5054ರ ಯೋಜನೆಯಲ್ಲಿ 238.84 ಲಕ್ಷ ರೂ. 3054ರ ಯೋಜನೆಯಲ್ಲಿ 330.36 ಲಕ್ಷ ರೂ. ಅದೇ ಕೋಲಾರ ಜಿಲ್ಲೆಗೆ 1809.17 ಮತ್ತು 1195.50 ಲಕ್ಷ ರೂಪಾಯಿಗಳನ್ನು ಕೊಟ್ಟು ನನ್ನ ಗದಗ್ ಜಿಲ್ಲೆಗೆ ಮಾತ್ರ 238 ಲಕ್ಷ

ರೂಪಾಯಿಗಳನ್ನು ಕೊಟ್ಟಿರುವುದು ಇದು ಯಾವ ನ್ಯಾಯ? ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು: ತಾವು ವೆಂಕಟಮುನಿಯಪ್ಪನವರಾ?

ಒಬ್ಬ ಮಾನ್ಯ ಸದಸ್ಯರು: ಅಲ್ಲ ಸಾರ್, ಅದಕ್ಕೆ ನಾನು ಪೂರಕವಾದ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು: ಕೇಳಿದರಲ್ಲ, ಅವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಾಯಿತು. ನಿಮ್ಮದೇನಾದರೂ ಇದ್ದರೆ ಬರೆದು ಕಳುಹಿಸಿ. ಆಮೇಲೆ ನೋಡೋಣ.

ಒಬ್ಬ ಮಾನ್ಯ ಸದಸ್ಯರು: ನಾನು ಉಪಪ್ರಶ್ನೆಯನ್ನು ಕೇಳುತ್ತಿದ್ದೇನೆ ಉಪಾಧ್ಯಕ್ಷರೇ.

ಉಪಾಧ್ಯಕ್ಷರು: ತಾವು ಕುಳಿತುಕೊಳ್ಳಿ. ಮಾನ್ಯ ವೆಂಕಟಮುನಿಯಪ್ಪನವರೇ, ತಾವು ಪ್ರಶ್ನೆಯನ್ನು ಕೇಳಿ.